ಅವಳು ಕೆಳಗುರುಳಿದಳು. ಅವಳಿಗೆ ಪ್ರಜ್ಞೆಯೇನೋ ಬೇಗನೆ ಮರುಕಳಿಸಿತು. ಆದರೆ, ಅವಳ ಜೀವದ್ರವ್ಯವೆಲ್ಲಾ ಸೋರಿ ಹೋಗಿತ್ತು.

ಆ ಶಾದಿ ಮಹಲಿನ ಮಹಡಿಯಲ್ಲಿದ್ದ ಕೊಠಡಿಯೊಂದರಲ್ಲಿ ಮಲಗಿದ್ದ ರೆಹಮತ್‌ಳೊಡನೆ ಅವಳ ಮಗ ನಯಾಜ್ ಇದ್ದ. ಅವಳ ಕೈಯನ್ನು ಹಿಡಿದು, ಬೆವರುತ್ತಿದ್ದ ಅವಳ ಕತ್ತನ್ನು ಅಪಾರ ಕಾಳಜಿಯಿಂದ ಒರೆಸುತ್ತಾ ಅವಳ ತಲೆಕೂದಲನ್ನು ಸರಿ ಪಡಿಸುತ್ತಾ, 'ಅಮ್ಮೀ... ಸುಸ್ತಾಯಿತಾ... ಯಾಕೆ ತುಂಬಾ ಟೆನ್ಷನ್‌ನಲ್ಲಿದೀರಾ... ನೀವು ಸುಮ್ಮನೆ ಕುಳಿತುಕೊಳ್ಳಿ ಸಾಕು... ಬಾಕಿ ಕೆಲಸವನ್ನೆಲ್ಲಾ ನಾವು ನೋಡ್ಕೊತೀವಿ' ಎಂದು ಅವಳಿಗೆ ಸಾಂತ್ವನ ನೀಡುತ್ತಿದ್ದ. ಅವಳ ಕಣ್ಣುಗಳು ತುಂಬಿ ಬಂದವು.

'ನನಗಾದರೂ ನೀನಿದೀಯಲ್ಲಾ ಮಗೂ... ಆ ನಿರ್ಭಾಗ್ಯ ತಂದೆ ತಾಯಿಯರ ಈ ಹೊತ್ತಿನ ದುರದೃಷ್ಟವಾದರೂ ಎಂತಹುದು...' ಅವಳು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು .

ಹಾಗೆ ಬಿಕ್ಕುತ್ತಲೇ ಅವಳು ನೀಡಿದ ಮಾಹಿತಿಯಿಂದ ಅವನು ಕೂಡಾ ಅವಾಕ್ಕಾದ. ಸಾದಿಖಾಳಿಂದ ಅವನು ಒಂದಿಷ್ಟು ಮಾಹಿತಿ ಪಡೆದಿದ್ದರೂ ವಿಷಯ ಇಷ್ಟೊಂದು ಗಂಭೀರ ಸ್ವರೂಪದ್ದೆಂದು ಅವನಿಗೆ ಅನಿಸಿರಲಿಲ್ಲ. ಹಿಂದೆ ನಡೆದಿದ್ದ ಅಜ್ರಾ ಮತ್ತು ಅನೀಸ್‌ನ ಮದುವೆಯ ಪ್ರಸ್ತಾಪ ಈಗ ಅನಗತ್ಯ ಪ್ರಚಾರ ಪಡೆದು ಟೀವಿ ಕ್ಯಾಮೆರಾಗಳು ಈ ಶಾದಿ ಮಹಲಿನ ಮೇಲೆ ಅಥವಾ ತಮ್ಮ ಮನೆಯ ಕಿಟಕಿ ಬಾಗಿಲುಗಳ ಮೇಲೆ ಎರಗಿದರೆ ಏನಪ್ಪಾ ಗತಿ ಎಂದು ಅವನು ಗಾಬರಿಯಾದ. ರೆಹಮತ್ ಅನೀಸ್‌ನ ತಂದೆತಾಯಿಯರನ್ನು ನೆನೆದು ಕಣ್ಣೀರು ಹರಿಸುತ್ತಿದ್ದರೆ, ನಯಾಜ್ ತಮ್ಮ ಕುಟುಂಬ ಈ ಬಿರುಗಾಳಿಯಲ್ಲಿ ಅನವಶ್ಯಕವಾಗಿ ಸೆಳೆಯಲ್ಪಡುತ್ತದಲ್ಲಾ ಎಂದು ಅಕಾರಣ ಭೀತಿಗೊಳಪಟ್ಟ. ಇಬ್ಬರೂ ತಮ್ಮ ತಮ್ಮ ಮನೋಲೋಕದಲ್ಲಿ ಕರಗಿಹೋಗಿದ್ದರು. ಅವನು ಅವಳ ಕೈಯನ್ನು ಹಿಡಿದು ಅವಳಿಗೆ ಅಭಯ ನೀಡುತ್ತಿದ್ದರೂ ಅವರಿಬ್ಬರೂ ತಮ್ಮ ತಮ್ಮ ವಿಭಿನ್ನ ಮನಃಪಟಲದಲ್ಲಿ ಭೂಗತರಾಗಿದ್ದರು.

ರೆಹಮತ್‌ಳ ನೆನಪು ಮತ್ತೆ ಹಿಂದಕ್ಕೋಡಿತು. ಅಜ್ರಾಳ ಮದುವೆಗಾಗಿ ಗಂಡು ಹುಡುಕುತ್ತಾ ರೆಹಮತ್ ದೈಹಿಕ ಮತ್ತು ಮಾನಸಿಕವಾಗಿ ಬಸವಳಿದಿದ್ದಳು. ಆ ಸಂದರ್ಭದಲ್ಲಿ ಅವಳ ಸಹೋದ್ಯೋಗಿ ಸಾದಿಕಾ ಅವಳ ನೆರವಿಗೆ ಬಂದಳು. ತನಗೆ ಪರಿಚಿತಳಾದ ಉರ್ದು ಉಪನ್ಯಾಸಕಿ ಆಸಿಫಾಳ ಒಬ್ಬನೇ ಮಗನಿಗೆ ಆಕೆ ಸೂಕ್ತ ವಧುವಿನ ತಲಾಶಿನಲ್ಲಿದ್ದಾಳೆ ಎಂಬ ಸುದ್ದಿ ರೆಹಮತ್‌ಗೆ ಲಭಿಸಿದಾಗ ಅವಳಿಗೆ ಹುಮ್ಮಸ್ಸು ಮೂಡಿ ಬಂದಿತು. ಸುದ್ದಿ ತಲುಪಿದೊಡನೆಯೇ ಹಾರಿ ಹೋಗಿ ಕೊಂಡು ತರಲು ಅದೇನೂ

